ಸೂಚನೆಯನ್ನು ಕೊಡುತ್ತೇನೆ ಈ ಸದನದ ಮೂಲಕ ನಾನು ನನ್ನ ಅನುಭವದ ಆಧಾರದ ಮೇಲೆ ಹೇಳುತ್ತಿದ್ದೇನೆ ತಾವು ಒಂದು ಕಾಗದ ಹಿಡಿದುಕೊಂಡು ಅದರ ಬೆನ್ನು ಹತ್ತಿದರೆ ಮಾತ್ರ ಆ ಕೆಲಸ ಆಗುತ್ತದೆ. ಅದಕ್ಕೆ ತಾವು ಶ್ರಮ ವಹಿಸಿ ಕೆಲಸ ಮಾಡಿ.

ಶ್ರೀ ಎಸ್.ಪಿ. ಮುದ್ದ ಹನುಮೇಗೌಡ:- ಮಾನ್ಯ ಅಧ್ಯಕ್ಷರೇ ನಾನು ಸಾಕಷ್ಟು ಆಸಕ್ತಿ ವಹಿಸಿ ಕೆಲಸ ಮಾಡಿದ್ದರಿಂದಲೇ ಸ್ಥಳ ಪರಿಶೀಲನೆ ಮಾಡಿದ್ದುದು.

ಅಧ್ಯಕ್ಷರು:- ನಾನು ಸಭಾಧ್ಯಕ್ಷನಾಗಿ ನನ್ನ ಕ್ಷೇತ್ರದ ಒಂದು ಸಣ್ಣ ಕೆಲಸ ಆಗಬೇಕಾದರೆ ಕಾಗದ ಹಿಡಿದು ನನ್ನ ಆಪ್ತ ಸಹಾಯಕರನ್ನು ಕಳುಹಿಸಿ ಅವರು ಬೆಳಿಗ್ಗೆಯಿಂದ ರಾತ್ರಿಯವರೆಗೂ ಓಡಾಡಿದಾಗ ಮಾತ್ರ ಅದು ಒಂದು ಆಜ್ಞೆಯಾಗಿ ಹೊರಗಡೆ ಬರಬೇಕಾದರೆ ಒಂದೂವರೆ ತಿಂಗಳು ಆಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ ನಾವು ಎಷ್ಟೇ ಓಡಾಡಿದರೂ ಸಹ ಅದು ಆಗುವುದಿಲ್ಲ ಎಂದ ಮೇಲೆ ಇಲ್ಲಿ ಪ್ರಶ್ನೆಯ ಮೂಲಕ ತಮ್ಮ ಗಮನ ಸೆಳೆದು ಆ ಕೆಲಸ ಆಗಬಹುದು ಎನ್ನುವ ನಂಬಿಕೆಯಿಂದ ನಾವು ಪ್ರಶ್ನೆಗಳನ್ನು ಕಳುಹಿಸುತ್ತೇವೆ. ಆದರೆ ತಾವೇ ಈ ರೀತಿ ಹೇಳಿದರೆ ಇನ್ನು ನಾವು ಯಾರ ಹತ್ತಿರ ಹೋಗುವುದು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಮಾನ್ಯ ಅಧ್ಯಕ್ಷರೇ ಇದುವರೆಗೂ ಕ್ರೀಡಾಂಗಣವನ್ನು ನಿರ್ಮಾಣ ಮಾಡತಕ್ಕಂಥ ಕೆಲಸ ಆಗಿಲ್ಲ. ದಯಮಾಡಿ ಮಾನ್ಯ ಯುವಜನ ಮತ್ತು ಕ್ರೀಡಾ ಸಚಿವರು ನಿರ್ದಿಷ್ಟವಾಗಿ ಯಾವಾಗ ಪ್ರಾರಂಭ ಮಾಡುತ್ತಾರೆ ಎನ್ನುವುದು ಹೇಳಬೇಕು. ಈ ಯೋಜನೆಗೆ 6 ಲಕ್ಷ ರೂಪಾಯಿ ಇಟ್ಟುಕೊಂಡಿದ್ದಾರೆ ಇದು ಸಾಕಾಗುತ್ತದೆಯೇ? ಈ ಬಗ್ಗೆ ಮಾನ್ಯ ಸಚಿವರು ನಿರ್ದಿಷ್ಟವಾದ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಅಜಯಕುಮಾರ್ ಸರ್ ನಾಯಕ್:- ಮಾನ್ಯ ಅಧ್ಯಕ್ಷರೆ, ಈ ಜಮೀನು ಪಶು ಸಂಗೋಪನಾ ಇಲಾಖೆಯ ಅಧೀನದಲ್ಲಿದ್ದು ಇದನ್ನು ಪ್ರೈವೇಟ್ ಸ್ಪಡ್ ಫಾರಂಗೆ ಈಗಾಗಲೇ ಸ್ಥಳಾಂತರ ಮಾಡಿದ್ದಾರೆ. ಅದನ್ನು ವಾಪಸ್ ಪಡೆಯಲು ಸಂಬಂಧಪಟ್ಟ ಡೆಪ್ಯೂಟಿ ಕಮಿಷನರ್‌ರವರಿಗೆ ಹೇಳಿದ್ದೇವೆ. ಅದನ್ನು ತೆಗೆದುಕೊಂಡು 1997-98ನೇ ಸಾಲಿನಲ್ಲಿ ಕೆಲಸ ಪ್ರಾರಂಭ ಮಾಡಿಸುತ್ತೇವೆ. ಅದಕ್ಕೆ ಬೇಕಾದ ಹಣವನ್ನು ಜಿಲ್ಲಾ ಪಂಚಾಯಿತಿಯಲ್ಲಿ ಇಡಲಾಗಿದೆ.

ಶ್ರೀ ಮುದ್ದಹನುಮೇಗೌಡ:- ಆ ಕೆಲಸಕ್ಕೆ ಬರೀ 6 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ.

ಅಧ್ಯಕ್ಷರು:- ಸದ್ಯಕ್ಕೆ ಕೆಲಸ ಪ್ರಾರಂಭವಾಗಲಿ. ಉಳಿದ ಹಣ ಆಮೇಲೆ ಬರುತ್ತದೆ.

ವಿಷಯ:- ಬಂಡಿಹೊಳೆ ಹತ್ತಿರ ಹೇಮಾವತಿ ನದಿಗೆ ಸೇತುವ ನಿರ್ಮಾಣ.

47(111)

ಶ್ರೀ ಬಿ. ಪ್ರಕಾಶ್ (ಕೆ.ಆರ್.ಪೇಟೆ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಬಂಡಿಹೊಳೆ ಹತ್ತಿರ ಹೇಮಾವತಿ ನದಿಗೆ ಸೇತುವೆ ನಿರ್ಮಾಣ ಕಾರ್ಯ ಅರ್ಧಕ್ಕೆ ನಿಂತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಸೇತುವೆ ಕಾಮಗಾರಿಯ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಹೌದು.

ಆ) ಸೇತುವೆ ಕೆಲಸವು ಪ್ರಗತಿಯಲ್ಲಿದ್ದಾಗ ಗಮನಿಸಿದ ಕೆಲವು ಅನಿರೀಕ್ಷಿತ ತಾಂತ್ರಿಕ ತೊಂದರೆಗಳಿಂದಾಗಿ, ಕೆಲಸವನ್ನು ಸ್ಥಗಿತಗೊಳಿಸಲಾಯಿತು. ಕೆಲಸ ಮುಗಿಸಲು ಬೇಕಾದ ಎಲ್ಲಾ ವಿವರಗಳನ್ನು ಅಳವಡಿಸಿ, ಪರಿಷ್ಕೃತ ಅಂದಾಜನ್ನು ತಯಾರಿಸಿಲಾಗಿದ್ದು ಪರಿಶೀಲಿಸಲಾಗುತ್ತಿದೆ.

ಶ್ರೀ ಬಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೆ, ಸೇತುವೆ ಕೆಲಸದ ಪ್ರಗತಿಯಲ್ಲಿದ್ದಾಗ ಗಮನಿಸಿದ ಕೆಲವು ಅನಿರೀಕ್ಷಿತ ತಾಂತ್ರಿಕ ತೊಂದರೆಗಳಿಂದಾಗಿ ಕೆಲಸವನ್ನು ಸ್ಥಗಿತಗೊಳಿಸಲಾಗಿದೆಯೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಈ ಸೇತುವೆ ಕೆಲಸವನ್ನು 1991 ರಿಂದ ನಿಲ್ಲಿಸಲಾಗಿದೆ. ಅದಕ್ಕೆ ಕಾರಣ ಇಷ್ಟೇ, ಆವತ್ತಿನ ದಿವಸ ಧಾರಾಕಾರವಾಗಿ ಮಳೆ ಸುರಿದಿದ್ದರಿಂದ ಗೋರೂರು ಡ್ಯಾಂ ಭರ್ತಿ ಆಯಿತು. ಆಗ ಅಧಿಕಾರಿಗಳು ಸರಿಯಾಗಿ ಗಮನ ಹರಿಸದೆ ಏಕಾ ಏಕಿ ಡ್ಯಾಮ್‌ನ ಬಾಗಿಲುಗಳನ್ನು ತೆರೆದಿದ್ದರಿಂದ ನೀರು ಪ್ರವಾಹದ ರೀತಿಯಲ್ಲಿ ಸೇತುವೆಯ ಪಿಲ್‌ರ್‌ಗಳ ಮೇಲೆ ಹರಿದ ಪರಿಣಾಮವಾಗಿ ಕೆಲಸವನ್ನು ನಿಲ್ಲಿಸಲಾಯಿತು. ಗೋರೂರು ಡ್ಯಾಮ್‌ನ ಬಾಗಿಲುಗಳನ್ನು ಏಕಾಏಕಿ ಅಧಿಕಾರಿಗಳು ತೆಗೆದಿದ್ದರಿಂದ ಈ ರೀತಿ ಪ್ರವಾಹ ಬರುವುದಕ್ಕೆ ಕಾರಣವಾಗಿದೆಯೆಂದು ಅಲ್ಲಿನ ಹಿರಿಯರು ಹೇಳುತ್ತಾರೆ. ಈ ಪಿಲ್‌ರ್‌ಗಳನ್ನು ಸ್ಟ್ರೆಂಗ್‌ತ್ನ್ ಮಾಡಬೇಕಾದರೆ, ಸ್ವಲ್ಪ ಹೈಟ್ ಮಾಡಬೇಕೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಇದರಿಂದಾಗಿ ಆವತ್ತು 83 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಇದ್ದದ್ದು, ಇವತ್ತು 3 ಕೋಟಿ ರೂಪಾಯಿಗಳ ಎಸ್ಟಿಮೇಟ್ ಆಗಿದೆ. ಆ ಪಿಲ್‌ರ್‌ಗಳನ್ನು ಹೈಟ್ ಮಾಡುವ ಅವಶ್ಯಕತೆ ಇದೆಯಾ? ಅವಶ್ಯಕತೆ ಇದ್ದರೆ ಯಾವಾಗ ಆ ಕೆಲಸವನ್ನು ಪ್ರಾರಂಭ ಮಾಡಿ ಮುಗಿಸಿಕೊಡಲಾಗುತ್ತದೆ?

ಶ್ರೀ ಸಿ.ಎಂ. ಉದಾಸಿ:- ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಈ ಬಗ್ಗೆ ವ್ಯಕ್ತಪಡಿಸಿರುವ ಆತಂಕ ಸತ್ಯವೆಂದು ನಾನು ಭಾವಿಸುತ್ತೇನೆ. 1987ನೇ ಇಸವಿಯಲ್ಲಿ ಕೇಂದ್ರ ಸರ್ಕಾರದ ಸಿ.ಆರ್.ಎಫ್. ಯೋಜನೆ ಮೂಲಕ 70 ಲಕ್ಷ ರೂಪಾಯಿ ಅಂದಾಜಿನಲ್ಲಿ ಈ ಸೇತುವೆಯನ್ನು ಮಾಡಿಕೊಳ್ಳಲಾಗಿತ್ತು. ಆ ಸಂದರ್ಭದಲ್ಲಿ 55,500 ಕ್ಯೂಸೆಕ್ಸ್ ಆ ನದಿಯಲ್ಲಿ ನೀರು ಹರಿಯುತ್ತದೆನ್ನುವ ಅಂದಾಜಿನ ಮೇಲೆ ಸೇತುವೆಯನ್ನು ನಿರ್ಮಾಣ ಮಾಡುವಂಥ ಕಾರ್ಯಕ್ರಮವನ್ನು ರೂಪಿಸಿಕೊಳ್ಳಲಾಗಿತ್ತು. ಏಕಾ ಏಕಿ 83 ಸಾವಿರ ಕ್ಯೂಸೆಕ್ಸ್ ನೀರು ಆ ನದಿಯಲ್ಲಿ ಹರಿದ ನಂತರ, ಈಗಿರುವ ಸೇತುವೆಯ ಎತ್ತರ ಸಾಲದು ಎಂದು ತೀರ್ಮಾನ ಮಾಡಿರುವುದರ ಜೊತೆಗೆ ಈಗಿರುವಂಥ **8 ಸ್ಪಾನರ್‌ಗಳ** ಬದಲಾಗಿ **10 ಸ್ಪಾನರ್‌ಗಳನ್ನು** ರಚಿಸುವುದು ಅವಶ್ಯವೆಂದು ಕಂಡು ಬಂದಿದೆ. ಜೊತೆಗೆ ಈ ಸೇತುವೆಯು ಹೇಮಾವತಿ ಡ್ಯಾಮ್‌ನ ಒಂದು ಕಿಲೋಮೀಟರ್

ಹತ್ತಿರದಲ್ಲೇ ಇರುವುದರಿಂದ ಯಾವುದಾದರು ಸಂದರ್ಭದಲ್ಲಿ ಹೆಚ್ಚು ಮಳೆ ಬಂದಂಥ ಸಂದರ್ಭದಲ್ಲಿ ಡ್ಯಾಮ್‌ನಿಂದ ಹೆಚ್ಚು ನೀರು ಬಿಡಬೇಕಾದುದು ಅನಿವಾರ್ಯವಾಗುತ್ತದೆ. ಆ ಕಾರಣದಿಂದ ಯೋಜನೆಯ ನಕ್ಷೆಯನ್ನು ಬದಲಾವಣೆ ಮಾಡಲಾಗಿದೆ. ಅದಕ್ಕಾಗಿ ಈ ಯೋಜನೆಗೆ 2 ಕೋಟಿ 72 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಮುಂಬರುವ ದಿನಗಳಲ್ಲಿ ಇದು ಮುಳುಗು ಸೇತುವೆಯಾಗಿ ಇರಬಾರದೆನ್ನುವ ಉದ್ದೇಶದಿಂದ ಈ ಯೋಜನೆಯನ್ನು ರೂಪಿಸಲಾಗಿದೆ.

ಶ್ರೀ ಬಿ. ಪ್ರಕಾಶ್:- ಈ ಕೆಲಸವನ್ನು ಯಾವಾಗ ಪ್ರಾರಂಭಗೊಳಿಸುತ್ತಾರೆ? ಮತ್ತು ಯಾವಾಗ ಪೂರ್ಣಗೊಳಿಸಿಕೊಡುತ್ತಾರೆಂದು ಕೇಳುತ್ತೇನೆ.

ಶ್ರೀ ಸಿ.ಎಂ. ಉದಾಸಿ:- ಅತಿ ಶೀಘ್ರದಲ್ಲಿ ಕೆಲಸವನ್ನು ಪ್ರಾರಂಭ ಮಾಡಿಸುತ್ತೇವೆ.

ಅಧ್ಯಕ್ಷರು:- ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಈ ದಿವಸ ಗೈರು ಹಾಜರಾಗುವುದಕ್ಕೆ ನನ್ನ ಅನುಮತಿ ಪಡೆದಿರುವುದರಿಂದ ಅವರ ಚುಕ್ಕೆ ಪ್ರಶ್ನೆ ಸಂಖ್ಯೆ: 48(550)ನ್ನು ತಡೆಹಿಡಿಯಲಾಗಿದೆ, ಅವರು ಇದ್ದಾಗ ಇದನ್ನು ತೆಗೆದುಕೊಳ್ಳಲಾಗುತ್ತದೆ.

ವಿಷಯ:- ರಾಜ್ಯದಲ್ಲಿರುವ ನೊಂದಾಯಿತ ವಕೀಲರುಗಳ ಸಂಖ್ಯೆ ಬಗ್ಗೆ.

49(397)

ಶ್ರೀ ಕೆ. ಪ್ರತಾಪ್ ಚಂದ್ರಶೆಟ್ಟಿ (ಕುಂದಾಪುರ):- ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ನೊಂದಾಯಿತ ವಕೀಲರ ಸಂಖ್ಯೆ ಎಷ್ಟು;(ಜಿಲ್ಲಾವಾರು ವಿವರ ನೀಡುವುದು).

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನೊಂದಾಯಿತ ವಕೀಲರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು).

ಯಂ.ಸಿ. ನಾಣಯ್ಯ, (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು):-

ಅ) ರಾಜ್ಯದಲ್ಲಿ ಮಾರ್ಚ್ 1996 ರವರೆಗೆ ನೊಂದಾಯಿತ ವಕೀಲರ ಒಟ್ಟು ಸಂಖ್ಯೆ 25,201. ಜಿಲ್ಲಾವಾರು ವಿವರಗಳನ್ನು ಲಗತ್ತಿಸಿರುವ ಅನುಬಂಧ-1 ರಲ್ಲಿ ಒದಗಿಸಲಾಗಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೊಂದಾಯಿತ ವಕೀಲರ ಒಟ್ಟು ಸಂಖ್ಯೆ 1,669. ತಾಲ್ಲೂಕುವಾರು ನೊಂದಾಯಿತ ವಕೀಲರ ವಿವರಗಳನ್ನು ಲಗತ್ತಿಸಿರುವ ಅನುಬಂಧ-2 ರಲ್ಲಿ ಒದಗಿಸಲಾಗಿದೆ.